ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ (ಐ ಎಸ್.ಇ ಸಿ ) ಯಲ್ಲಿ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಸಾರ್ವಜನಿಕ ನೀತಿ ಮತ್ತು ಆಡಳಿತದ ಬಗ್ಗೆ ತರಬೇತಿ ನೀಡುವ ಕುರಿತು.

ಓದಲಾಗಿದೆ: ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ಇವರ ಪತ್ರ ಸಂಖ್ಯೆ:ಡಿಪಿಎ/153/ಪಿಪಿಜಿಪಿ/ಟಿಆರ್ ಜಿ-3/2019/782, ದಿನಾಂಕ:26-08-2019.

*******

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ (ಐ ಎಸ್.ಇ ಸಿ.) ಯಲ್ಲಿ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಸಾರ್ವಜನಿಕ ನೀತಿಯ ರಚನೆ, ಅನುಷ್ಠಾನ ಮತ್ತು ಇದರಿಂದ ಆಡಳಿತವನ್ನು ಉತ್ತಮಗೊಳಿಸುವ ಕುರಿತು ತರಬೇತಿಯನ್ನು ನೀಡಲು ಬಯಸಿರುವುದಾಗಿ ತಿಳಿಸಿದೆ. ಇದೇ ರೀತಿಯ ತರಬೇತಿಯನ್ನು ಈಗಾಗಲೇ 2018-19ನೇ ಸಾಲಿನಲ್ಲಿ ನೀಡಲಾಗಿದ್ದು, ಒಂದು ತರಬೇತಿ ಶಿಬಿರವನ್ನು 2019ನೇ ನವೆಂಬರ್ (ತಾತ್ಕಾಲಿಕ) ನಲ್ಲಿ ಹಾಗೂ 2020ನೇ ಇಸವಿಯಲ್ಲಿ ಮೂರು ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಲು ಬಯಸಿರುವುದಾಗಿ ತಿಳಿಸಿರುತ್ತಾರೆ. ಪ್ರತಿ ಶಿಬಿರಾರ್ಥಿಗೆ ರೂ.4,70,700/- ರಂತೆ 25 ಜನ ಶಿಬಿರಾರ್ಥಿಗಳುಳ್ಳ ಪ್ರತಿ ತರಬೇತಿ ಕಾರ್ಯಕ್ರಮಕ್ಕೆ ರೂ 1,17,67,494/- ವೆಚ್ಚವಾಗುವುದೆಂದು ತಿಳಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ (ಆಸು) 118 ಕೆಟಿಪಿ 2019,**

**ಬೆಂಗಳೂರು, ದಿನಾಂಕ:16-11-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ನೀತಿಯ ರಚನೆ, ಅನುಷ್ಠಾನ ಮತ್ತು ಇದರಿಂದ ಕಾರ್ಯಕ್ಷಮತೆ ಹೆಚ್ಚಿಸಿ ಆಡಳಿತವನ್ನು ಉತ್ತಮಗೊಳಿಸುವ ಕುರಿತು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ ರಾಜ್ಯದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲು ನಿರ್ಧರಿಸಲಾಗಿದೆ. ಪ್ರತಿ ತರಬೇತಿಯು 25 ಶಿಬಿರಾರ್ಥಿಗಳಿಗೆ ಸೀಮಿತಗೊಳಿಸಿ, ಪ್ರತಿ ಶಿಬಿರಾರ್ಥಿಗೆ ರೂ 4,70,700/- ರಂತೆ 25 ಜನ ಶಿಬಿರಾರ್ಥಿಗಳುಳ್ಳ ಪ್ರತಿ ತರಬೇತಿ ಕಾರ್ಯಕ್ರಮಕ್ಕೆ ರೂ 1,17,67,494/- (ಒಂದು ಕೋಟಿ ಹದಿನೇಳು ಲಕ್ಷದ ಅರವತ್ತೇಳು ಸಾವಿರದ ನಾಲ್ಕುನೂರ ತೊಂಬತ್ನಾಲ್ಕು ರೂಪಾಯಿಗಳು ಮಾತ್ರ) ವೆಚ್ಚಗಳಲ್ಲಿ (ಮುಂಬರುವ ಪ್ರತಿ ಆರ್ಥಿಕ ವರ್ಷದಲ್ಲಿ ಶೇಕಡ 10ರಷ್ಟು ಏರಿಕೆಯೊಂದಿಗೆ) 2019-2020ರಲ್ಲಿ 1 ತರಬೇತಿ, 2020-21, 2021-22 ಮತ್ತು 2022-23ನೇ ಆರ್ಥಿಕ ವರ್ಷಗಳಲ್ಲಿ ಪ್ರತಿ ವರ್ಷ ತಲಾ 3 ತರಬೇತಿಗಳನ್ನು ಕೈಗೊಳ್ಳಲು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯೊಂದಿಗೆ ಈ ಸಂಬಂಧ ಒಡಂಬಡಿಕೆಯೊಂದನ್ನು ಮಾಡಿಕೊಳ್ಳಲು ಸರ್ಕಾರವು ನಿರ್ಧರಿಸಿದೆ.

ಈ ಒಡಂಬಡಿಕೆಯನ್ನು ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಹಿಂಬರಹ ಸಂಖ್ಯೆ-ಆಇ 207 ವೆಚ್ಚ-12/2019, ದಿನಾಂಕ:02/11/2019ರಲ್ಲಿ ತನ್ನ ಸಹಮತವನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

N. S. Gayathri devi 16/11/2019

(ಎನ್.ಎಸ್. ಗಾಯತ್ರಿದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಸು-ತರಬೇತಿ)

18/11/19 o/c

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ)/(ಇ & ಆರ್ ಎಸ್ ಎ), ಕರ್ನಾಟಕ, ಬೆಂಗಳೂರು-01.

...2.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು

3. ನಿರ್ದೇಶಕರು, ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಸಂಸ್ಥೆ, ಡಾ: ವಿ.ಕೆ ಆರ್ ವಿ ರಾವ್ ರಸ್ತೆ, ನಾಗರಭಾವಿ, ಬೆಂಗಳೂರು-560072.

4. ಕಚೇರಿ ಪ್ರತಿ/ ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.